SRI H. SIDDAVEERAPPA :—The total value of the indents for the year 1971–1972 was Rs. 87,85,10 . Out of this, deduct 30 per cent which the Officers are authorised to indent and the rest is under the control of the Director.

RELEASE OF ADVERTISEMENT

560. SRI KONANDUR LINGAPPA (Thirthahally).—Will the Minister of State for Planning and Information be pleased to state .—

(*a*) The quantum of advertisements released each time by the Government every month to the dailies, weeklies, fortnightlies and monthlies published in the State ;

(*b*) the amount that is being paid by the Government every month to each paper (the details regarding names of papers, amount paid, etc., from the last year till recently may be furnished) ?

SRI DEVENDRAPPA GHALAPPA .—(Minister of State for Planning and Information) .—

(*a*) The quantum of advertisement released to the Dailies, Weeklies and Monthlies is fixed on a yearly basis with reference to the bulk of advertisements received from various Government Departments also taking into consideration the standing and circulation of the papers, etc. These advertisements are released to individual papers periodically and on special occasions.

(*b*) Please see statement placed on the Table of the House. Copy placed in the Mysore Legislative library *vide No.* 13 dated 19th August 1972.

ಶ್ರೀ ಕೋಣಂದೂರು ಲಿಂಗಪ್ಪ .—ಇಲ್ಲಿ ನಮ್ಮ ರಾಜ್ಯದ ಪತ್ರಿಕೆಗಳಷ್ಟನ್ನೇ ತಿಳಿಸಿದೆ. ಇದರ ಜೊತೆಗೆ ಬೇರೆ ರಾಜ್ಯಗಳಿಗೆ ಯಾವ ಯಾವ ಪತ್ರಿಕೆಗಳಿಗೆ ಜಾಹೀರಾತನ್ನು ಕೊಡಲಾಗುತ್ತಿದೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

†ಶ್ರೀ ದೇವೇಂದ್ರಪ್ಪ ಘಾಳಪ್ಪ .—ಇಲ್ಲಿ ನಮ್ಮ ರಾಜ್ಯದಷ್ಟನ್ನೇ ಕೇಳಿರುವುದು. ಆದ್ದರಿಂದ ಈ ಪ್ರಶ್ನೆಯಲ್ಲಿ ಬೇರೆ ರಾಜ್ಯಗಳ ಜಾಹೀರಾತು ಉದ್ಭವಿಸುವುದಿಲ್ಲ. ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಬೇಕು.

ಶ್ರೀ ಕೋಣಂದೂರು ಲಿಂಗಪ್ಪ .—ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ ತಃಖ್ತೆಯನ್ನು ಮೇಜಿನ ಮೇಲೆ ಇಡಲಾಗಿದೆ ಎಂದು ಹೇಳಿದೆ. ಇಲ್ಲಿ ಮೇಜಿನ ಮೇಲೆ ಯಾವ ತಃಖ್ತೆಯೂ ಇಲ್ಲವಲ್ಲಾ?

ಅಧ್ಯಕ್ಷರು .—ಮೇಜಿನ ಮೇಲೆ ಎಂದರೆ ತಮ್ಮ ಮೇಜಿನ ಮೇಲೆ ಅಲ್ಲ. ಈ ಸದನದ ಕಾರ್ಯದರ್ಶಿಯವರ ಮೇಜಿನ ಮೇಲಿಟ್ಟಿದೆ ಎಂದು ಅದರ ಅರ್ಥ. ತಾವು ಮೊದಲೇ ಬಂದು ಅದನ್ನು ನೋಡಿಕೊಳ್ಳಬೇಕಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ .—ಜಾಹಿರಾತುಗಳನ್ನು ಕೊಡತಕ್ಕ ಬಗ್ಗೆ ಸರ್ಕಾರದವರು ಇಟ್ಟಿರ್ಬಿ ಕೊಂಡಿರತಕ್ಕ ಆಧಾರಗಳೇನೆಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ದೇವೇಂದ್ರಪ್ಪ ಘಾಳಪ್ಪ .—ಆಯಾಯ ವೃತ್ತಪತ್ರಿಕೆಗಳ ಸರ್ಕ್ಯುಲೇಷನ್ ನೋಡಿಕೊಂಡು ಈ ಜಾಹಿರಾತುಗಳನ್ನು ಕೊಡಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ .—ಅಡ್ವರ್ಟೈಜ್‌ಮೆಂಟ್ ಕೊಡತಕ್ಕ ಬಗ್ಗೆ ಅನುಸರಿಸಬೇಕಾದ ನೀತಿಯಲ್ಲಿ ಈ ಪತ್ರಿಕೆಗಳಿಗೆ ಜಾಹಿರಾತನ್ನು ಕೊಡತಕ್ಕ ಸಂದರ್ಭದಲ್ಲಿ ಯಾವ ಪತ್ರಿಕೆಗಳು ಹರಿಜನರ ಗಿರಿಜನರ ಅಭಿವೃದ್ಧಿಯ ವಿಚಾರದಲ್ಲಿ ಅಸ್ಪೃತೆಯ ನಿವಾರಣೆಯ ವಿಚಾರದಲ್ಲಿ ಉತ್ತಮ ಲೇಖನಗಳನ್ನು ಬರೆಯುತ್ತವೆಯೋ ಅಂಥ ಪತ್ರಿಕೆಗಳಿಗೆ ಒಟ್ಟು ಜಾಹಿರಾತಿನಲ್ಲಿ ಶೇಕಡ ೧೮ ರಷ್ಟನ್ನು ಮೀಸಲಾಗಿಡಬೇಕೆಂಬ ನೀತಿ ಇರುವಾಗ, ಅವರ ಬಗ್ಗೆ ಎಷ್ಟು ಹಣವನ್ನು ಯಾವ ಯಾವ ಪತ್ರಿಕೆಗಳಿಗೆ ಕೊಡಲಾಗಿದೆ ತಿಳಿಸುತ್ತೀರಾ ?

ಶ್ರೀ ದೇವೇಂದ್ರಪ್ಪ ಫಾಳಪ್ಪ .—ಹಾಗೇನೂ ಹರಿಜನರಿಗೆ ರಿಜರ್ವ್ ಮಾಡಬೇಕೆಂದಿಲ್ಲ .....

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ .—ನಾನು ಹೇಳಿದ್ದು ಹಾಗಲ್ಲ. ದಿನಪತ್ರಿಕೆಗಳಿಗಾಗಲೀ ಅಥವಾ ವಾರಪತ್ರಿಕೆಗಳಿಗಾಗಲೀ ಈ ಲೇಖನಗಳನ್ನು ಬರೆಯತಕ್ಕ ಬಗ್ಗೆ ಎಷ್ಟು ಹಣವನ್ನು ಯಾವ ಯಾವ ಪತ್ರಿಕೆಗಳಿಗೆ ಕೊಡಲಾಗಿದೆ ಎಂದು ಕೇಳಿದೆ ?

The other point I referred to is this. Of the total amo int allotted for advertisements, 18% should be set apart for the advertisements helping eradication of Untouchability and socio-econmic improvement of the Scheduled Castes and Scheduled Tribes. That is what I said.

SRI H. M. CHANNABASAPPA .—(Minister for Public Works) .—The suggestion of the hon. Member cannot be accepted as a matter of policy.

SRI M. H. JAYAPRAKASH NARAYANA —18% of the amount set apart for advertisements, should be set apart for the advertisements furthering the cause of the welfare of the scheduled Castes and Scheduled Tribes. The Hon. Chief Minister has promised to do that. Please let me know whether there is a policy to this effect, or not.

SRI H. M. CHANNABASAPPA .—Advertisements are for specific purposes on the basis of specific Rules and Procedures, prescribed in that behalf. If the suggestion of the hon. Member is included in the prescribed Rules and Procedures, that will be followed Otherwise not.

ಶ್ರೀ ಕೆ. ಎಚ್. ಹನುಮೇಗೌಡ .—ಜಿಲ್ಲಾ ಕೇಂದ್ರಗಳಿಂದ ಹೊರಡತಕ್ಕ ಚಿಕ್ಕ ಚಿಕ್ಕ ಪತ್ರಿಕೆಗಳಿಗೆ ಯಾವ ಆಧಾರದ ಮೇಲೆ ಜಾಹಿರಾತುಗಳನ್ನು ಕೊಡುತ್ತೀರಾ ?

ಶ್ರೀ ದೇವೇಂದ್ರಪ್ಪ ಫಾಳಪ್ಪ .—ಸರ್ಕ್ಯುಲೇಷನ್ ನೋಡಿಕೊಂಡು ಕೊಡಲಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ .—ಮಿನಿಮಂ ಕೊನೇ ಪಕ್ಷ ಎಷ್ಟಿರಬೇಕು ಎಂಬುದನ್ನು ತಿಳಿಸಿ ?

SRI H. M. CHANNABASAPPA .—Advertisements cannot be claimed as a matter of right by any paper. They are there for the purpose of giving adequate publication in respect of Government projects and things of that kind. The amounts are given for such purposes and it will not be distributed paper-wise. It will be considered on merits of each paper and it depends upon the nature of the advertisements released. Also, certain advertisements require to be adverised all over the State and even outside and certain advertisements are of a limited character and circulated in a limited area. Therefore, in this matter of distribution of advertisements, no hard and fast rules can be followed and advertisements cannot also be distributed among District papers and Taluka papers on that basis.

ಶ್ರೀ ಕೋಣಂದೂರು ಲಿಂಗಪ್ಪ.—ಸಣ್ಣ ಪತ್ರಿಕೆಗಳಿಗೆ ಜಾಹೀರಾತು ಕೊಡುವುದನ್ನು ನಿಲ್ಲಿಸಿರುವುದಕ್ಕೆ ಕಾರಣವೇನು ? ಇನ್ನು ಮುಂದಾದರೂ ಕೂಡ ರಾಜ್ಯದಲ್ಲಿರುವ ಎಲ್ಲಾ ಸಣ್ಣ ಪತ್ರಿಕೆಗಳಿಗೂ ಹೆಚ್ಚು ಜಾಹೀರಾತುಗಳನ್ನು ನೀಡುವರೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಸಣ್ಣ ಮತ್ತು ದೊಡ್ಡ ಪತ್ರಿಕೆಯ ಪ್ರಶ್ನೆಯಲ್ಲ. ವಿಷಯ ಯಾವ ಜಿಲ್ಲೆಗೆ ಸಂಬಂಧಪಟ್ಟಿದೆ ಎಂಬುದನ್ನು ನೋಡಿ ಸುತ್ತುಮುತ್ತಲಿನ ಪತ್ರಿಕೆಗಳಿಗೆ ಅದರ ಜಾಹೀರಾತನ್ನು ಕೊಡಲಾಗುವುದು. ಸ್ಟೇಟ್‌ವೈಜ್ ಆಗಿ ಸಂದರ್ಭಕ್ಕೆ ತಕ್ಕಂತೆ ಅಡ್ವರ್ಟೈಜ್ ಮಾಡಬೇಕಾಗುತ್ತದೆ. ಇಂಥ ಪತ್ರಿಕೆಗಳಿಗೇ ಕೊಡಬೇಕು ಎಂದು ಪ್ರಸ್ಕ್ರೈಬ್ ಮಾಡುವುದು ಕಷ್ಟ. ಎಲ್ಲಿ ಯಾವ ಪತ್ರಿಕೆಗೆ ಜಾಹೀರಾತು ಕೊಟ್ಟರೆ ಹೆಚ್ಚು ಅಡ್ವರ್ಟೈಜ್ ಆಗಬಹುದು ಎಂಬುದನ್ನು ನೋಡಿ ಎಲ್ಲಿಗೆ ಕೊಡುವುದರಿಂದ ಹೆಚ್ಚು ಪ್ರತಿಫಲ ಬರಬಹುದು ಎಂದು ನೋಡಿ ಅದಕ್ಕೆ ತಕ್ಕಂತೆ ಕೊಡಬೇಕಾಗುವುದು.

DISTRICT CENTRAL LIBRARY AT BIJAPUR

667. SRI J. L. KABADE (Ballolli).—Will the Minister for Education be pleased to state :—

(*a*) whether it is not a fact that the Government had issued orders in 1962 to start District Central Library at Bijapur ;

(*b*) whether according to G. O. No. ED 58 MLC 67, dated 19-1-1968 the Government had accorded sanction to the staff required for the same ;

(*c*) if so, whether the local Educational Officer was entrusted with the staff and authorised to incur expenditure for the salary, etc. of the staff and for the management of Bijapur District Central Library :

(*d*) the reason for not starting the said Library even though the Government have accorded its approval in all respects ?

SRI V. S. KOUJALGI (Minister of State for Youth Services).—On behalf of.

SRI A. R. BAPARINARAYANA (Minister for Education).—

(*a*) No.

(*b*) Yes.

(*c*) Yes.

(*d*) District Library authorities have taken up the preliminary works. Building required for the Library is under consideration.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರ ಜಿಲ್ಲೆ ಕೇಂದ್ರ ಗ್ರಂಥಾಲಯವನ್ನು ಶಿಕ್ಷಣಾಧಿಕಾರಿಗಳಿಗೆ ವಹಿಸಿ ಕೊಡುವ ಪ್ರಸಂಗವೇಕೆ ಬಂತು ? ಏಕೆಂದರೆ ೧೯೬೮ರಲ್ಲೇ ವಿಜಾಪುರದಲ್ಲಿ ಕೇಂದ್ರ ಗ್ರಂಥಾಲಯ ತೆರೆಯ ಬೇಕೆಂದು ಹುಕುಂ ಆಗಿದೆ. ಹಾಗಿರುವಾಗ ಅಲ್ಲಿ ಸ್ಥಳೀಯ ಶಿಕ್ಷಣಾಧಿಕಾರಿಗೆ ಗ್ರಂಥಾಲಯದ ಕಾರ್ಯ ನಿರ್ವಹಿಸಲು ಏಕೆ ಸೂಚಿಸಲಾಯ್ತು ?